ಸೆಲೆಬ್ರಿಟಿ

# ಸತ್ಯ ನುಡಿದ ರೇವತಿ

■ ರಾಹುಲ ಬೆಳಗಲಿ



‘ನಾನು ಸತ್ಯವನ್ನು ಹೇಳದೇ ಸುಮ್ಮನೆ ಇರಬಹುದಿತ್ತು. ತಂದೆ ಮತ್ತು ಮಗ ಇಬ್ಬರ ಮೇಲೆ ನಡೆದ ಪೊಲೀಸ್ ದೌರ್ಜನ್ಯದ ಬಗ್ಗೆ ಗೊತ್ತೇ ಇಲ್ಲ ಎಂಬಂತೆ ಮೌನ ವಹಿಸಬಹುದಿತ್ತು. ಆದರೆ, ಒಂದಿಲ್ಲೊಂದು ದಿನ ಸತ್ಯ ಹೊರಬರುತ್ತಿತ್ತು. ಆಗ ನಾನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಬೇಕಾಗುತಿತ್ತು. ಮುಜುಗರ ಅನುಭವಿಸಬೇಕಾಗುತಿತ್ತು. ಅದು ನನಗೆ ಇಷ್ಟವಿರಲಿಲ್ಲ. ಅದಕ್ಕೆ ಕಷ್ಟಕೋಟಲೆಗಳು ಎಂಥದ್ದೇ ಇರಲಿ, ಬಂದದ್ದನ್ನು ದಿಟ್ಟತನದಿಂದ ಎದುರಿಸಲು ನಿರ್ಧರಿಸಿದೆ. ಸತ್ಯವನ್ನೇ ನುಡಿದೆ’.

ರೇವತಿ ಹೀಗೆ ಹೇಳುವಾಗ, ಮೊಗದಲ್ಲಿ ನಿರಾಳಭಾವ ಇತ್ತು. ‘ಪ್ರಾಣಕ್ಕೆ ಅಪಾಯವಾಗುವ ಸನ್ನಿವೇಶ ಮತ್ತು ಕೆಲಸ ಕಳೆದುಕೊಳ್ಳುವ ಭೀತಿಯಿದ್ದರೂ ಯಾವುದಕ್ಕೂ ಹೆದರದೇ, ಇದ್ದುದ್ದನ್ನು ಇದ್ದ ಹಾಗೆ ಹೇಳಿದೆ’ ಎಂಬ ಸಮಾಧಾನ ಅವರಲ್ಲಿ ಕಾಣುತಿತ್ತು.

ತಮಿಳುನಾಡಿನ ತೂತುಕುಡಿ ಜಿಲ್ಲೆ ಸಾನತ್‌ಕುಳಂ ಠಾಣೆಯಲ್ಲಿ ನಡೆದ ತಂದೆ ಮತ್ತು ಮಗನ ಲಾಕಪ್ ಡೆತ್ ಪ್ರಕರಣದಲ್ಲಿ ಮಧುರೈ, ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಒಂಬತ್ತು ಪೊಲೀಸರಿಗೆ ಮರಣ ದಂಡನೆ ವಿಧಿಸಿದೆ. ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯ ನೀಡಿದವರು ಹೆಡ್‌ಕಾನ್ಸ್‌ಟೆಬಲ್ ರೇವತಿ.

ವರ್ಷ 2020. ಕೋವಿಡ್ ತೀವ್ರ ಸ್ವರೂಪದಲ್ಲಿ ವ್ಯಾಪಿಸಿತ್ತು. ಮಾಸ್ಕ್ ಹಾಕಿಕೊಳ್ಳದಿದ್ದರೆ, ನಿಯಮದಂತೆ ಅಂಗಡಿಗಳನ್ನು ಬಂದ್ ಮಾಡದಿದ್ದರೆ, ಲಾಕ್‌ಡೌನ್ ಇದ್ದರೂ ಹೊರಗಡೆ ಕಾಣಿಸಿಕೊಂಡರೆ, ವಿನಾಕಾರಣ ರಸ್ತೆಯಲ್ಲಿ ಓಡಾಡಿದರೆ, ಪೊಲೀಸರು ಲಾಠಿ ಬೀಸುತ್ತಿದ್ದರು. ಅಷ್ಟು ಕಠಿಣವಾಗಿ ನಿಯಮಾವಳಿ ರೂಪಿಸಲಾಗಿತ್ತು. ಅವಧಿ ಮೀರಿ ಮೊಬೈಲ್ ಫೋನ್ ಅಂಗಡಿ ತೆರೆದ ಆರೋಪದ ಮೇಲೆ ಜೂನ್ 19ರಂದು ಜಯರಾಜ್ ಮತ್ತು ಅವರ ಪುತ್ರ ಬೆನಿಕ್ಸ್ ಅವರನ್ನು ಸಾನತ್‌ಕುಳಂ ಪೊಲೀಸರು ಠಾಣೆಗೆ ಕರೆ ತಂದಿದ್ದರು. ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದ ಇಬ್ಬರೂ ಮೃತಪಟ್ಟಿದ್ದರು. ‘ಇಬ್ಬರ ಸಾವಿಗೆ ಪೊಲೀಸ್ ದೌರ್ಜನ್ಯವೇ ಕಾರಣ’ ಎಂದು ದೇಶವ್ಯಾಪಿ ಆಕ್ರೋಶ ವ್ಯಕ್ತವಾಗಿತ್ತು.

ಆ ರಾತ್ರಿ ಜಯರಾಜ್ ಮತ್ತು ಬೆನಿಕ್ಸ್ ಇಬ್ಬರೂ ತೀವ್ರ ಸ್ವರೂಪದ ದೌರ್ಜನ್ಯಕ್ಕೆ ಒಳಗಾಗಿದ್ದರು. ಪೊಲೀಸರು ಲಾಠಿ ಬೀಸುವುದು, ಹಿಂಸಿಸುವುದು ಮತ್ತು ವಿಕೃತವಾಗಿ ನಡೆದುಕೊಳ್ಳುವುದನ್ನು ತಡೆದುಕೊಳ್ಳಲು ಆಗದೇ, ರಕ್ಷಣೆಗಾಗಿ ಗೋಗರೆಯುತ್ತಿದ್ದರು. ಹಿಂಸೆ ಯಾವ ಪರಿ ಇತ್ತೆಂದರೆ, ಇಡೀ ಕೊಠಡಿಯು ರಕ್ತಸಿಕ್ತವಾಗಿತ್ತು. ಲಾಠಿಗಳು ಕೆಂಪಾಗಿದ್ದವು. ತಂದೆ ಮತ್ತು ಮಗ ಇಬ್ಬರೂ ನಗ್ನಾವಸ್ಥೆಯಲ್ಲಿದ್ದರು. ನಡೆದಾಡಲು ಆಗದ ಸ್ಥಿತಿಯಲ್ಲಿದ್ದರು. ಅವರ ಮೈಯೊಳಗಿನ ರಕ್ತವು ನೆಲದ ಮೇಲೆ ಹರಿದಾಗ, ಅದನ್ನು ಅವರ ಬಟ್ಟೆಗಳಿಂದಲೇ ಒರೆಸುವಂತೆ ಪೊಲೀಸರು ದಬಾಯಿಸಿದರು. ಇದೆಲ್ಲವೂ ನಡೆಯುತ್ತಿರುವುದನ್ನು ತಡೆಯಲು ಅದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ರೇವತಿ ಮತ್ತು ಇತರರು ಪ್ರಯತ್ನಿಸಿದರು. ಆದರೆ, ಹೆಚ್ಚು ಪ್ರಯೋಜನವಾಗಲಿಲ್ಲ.

ತನಿಖೆ ಆರಂಭಗೊಂಡಾಗ, ಪ್ರಕರಣದ ಕುರಿತು ಬಹುತೇಕ ಮಂದಿ ತುಟಿ ಬಿಚ್ಚಲು ಹಿಂಜರಿದರು. ಹಿರಿಯ ಅಧಿಕಾರಿಗಳು ಬೆದರಿಸಿದರು. ಆದರೆ, ರೇವತಿ ಮಾತ್ರ ಧೃತಿಗೆಡಲಿಲ್ಲ. ಭಯವೂ ಪಡಲಿಲ್ಲ. ಸಿಬಿಐ ಅಧಿಕಾರಿಗಳ ಎದುರು ಪೊಲೀಸರ ವರ್ತನೆ ಬಿಚ್ಚಿಟ್ಟರು. ನ್ಯಾಯಾಧೀಶರು ವಿಚಾರಣೆ ನಡೆಸಿದಾಗ, ಇದ್ದದ್ದು ಇದ್ದ ಹಾಗೆ ವಿವರಿಸಿದರು. ತಾವು ಹೇಳಿಕೆ ನೀಡಿದ ಕಾಗದಕ್ಕೆ ಸಹಿಯೂ ಹಾಕಿದರು. ಅವರಿಗೆ ಮತ್ತು ಕುಟುಂಬಕ್ಕೆ ಸೂಕ್ತ ಭದ್ರತಾ ವ್ಯವಸ್ಥೆ ಮಾಡುವಂತೆ ಮದ್ರಾಸ್ ಹೈಕೋರ್ಟ್ ಆದೇಶಿಸಿತು.

ಘಟನೆ ನಡೆದ ದಿನ ಅಲ್ಲದೇ ನ್ಯಾಯಾಲಯದ ವಿಚಾರಣೆ ಸಂದರ್ಭದಲ್ಲಿ ರೇವತಿ ಸತ್ಯಾಂಶಗಳನ್ನು ಹೇಳಿರದಿದ್ದರೆ, ಬಹುಶಃ ಈ ಪ್ರಕರಣವು ಇಷ್ಟೆಲ್ಲ ತಿರುವು ಪಡೆಯುತ್ತಿರಲಿಲ್ಲ. ಕಾರಣ: ದೌರ್ಜನ್ಯ ನಡೆದ ಘಟನೆಯ ಸುಳಿವು ಸಿಗದಂತೆ ಮಾಡಲು ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡಲಾಗಿತ್ತು. ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯಾವಳಿಗಳನ್ನು ಅಳಿಸಲಾಗಿತ್ತು. ಘಟನಾ ಸ್ಥಳದಲ್ಲಿದ್ದ ಕೆಲವಷ್ಟು ವಸ್ತುಗಳು ಸಿಗದಂತೆ ಮಾಡಿದರು. ‘ಎಲ್ಲರನ್ನೂ ಮತ್ತು ಎಲ್ಲವನ್ನೂ’ ಬೆದರಿಸುವ ಮಟ್ಟಕ್ಕೆ ಆರೋಪಿಗಳು ತಂತ್ರ ರೂಪಿಸಿದ್ದರು. ಆದರೆ, ರೇವತಿಯ ಸಾಕ್ಷ್ಯವು ಯಾರಿಗೂ ತಪ್ಪಿಸಿಕೊಳ್ಳದಂತೆ ಮಾಡಿತು.

ಬದುಕಿನಲ್ಲಿ ಆಗುತ್ತಿದ್ದ ಹಲವಾರು ಏರುಪೇರುಗಳನ್ನು ರೇವತಿ ಸಮರ್ಥವಾಗಿ ಎದುರಿಸಿದರು. ಖ್ಯಾತಿ, ಪ್ರಚಾರ ಬಯಸಲಿಲ್ಲ. ಎಲ್ಲವೂ ತನ್ನಿಂದಲೇ ಆಯಿತು ಎಂದು ಹೇಳಿಕೊಳ್ಳಲು ಹಾತೊರೆಯಲಿಲ್ಲ. ಮಾಧ್ಯಮದ ಎದುರು ಬರಲಿಲ್ಲ. ಅವರು ಮಾನಸಿಕವಾಗಿ ಅಷ್ಟು ದೃಢವಾಗಿದ್ದರು. ಕೆಲಸವನ್ನು ಕಳೆದುಕೊಳ್ಳಲು ಅಥವಾ ಅಮಾನತುಗೊಳ್ಳಲು ಸಹ ಸಿದ್ಧರಾಗಿದ್ದರು. ಆದರೆ, ಸತ್ಯವನ್ನು ಮುಚ್ಚಿಸಲು ಅವರು ಬಯಸಲಿಲ್ಲ. ಅದಕ್ಕೆ ಬದ್ಧರಾಗಿ ಉಳಿದರು.

ಆರೋಪಿ ಪೊಲೀಸರಿಗೆ ನ್ಯಾಯಾಲಯವು ಮರಣ ದಂಡನೆ ಪ್ರಕಟಿಸಿದಾಗ, ರೇವತಿ ಹೇಳಿದ್ದು ಇಷ್ಟು: ಶಿಕ್ಷೆಗೆ ಒಳಗಾದ ಪೊಲೀಸರ ಕುಟುಂಬದ ಸ್ಥಿತಿ ಬಗ್ಗೆ ಕನಿಕರ ಆಗುತ್ತದೆ. ಆದರೆ, ಆ ಕರಾಳ ರಾತ್ರಿಯಂದು ಪೊಲೀಸರು ಅಷ್ಟು ಭೀಭತ್ಸವಾಗಿ ನಡೆದುಕೊಳ್ಳಬಾರದಿತ್ತು. ಒಂದು ಮಾತಂತೂ ಸ್ಪಷ್ಟ. ಕಾನೂನಿನ ಎದುರು ಎಲ್ಲರೂ ಸಮಾನರು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65